ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಢಾಧಿಕಾರಿಗಳು ಇವರ

**ನ್ಯಾಯಾಲಯ, ಮೂಡಿಗೆರೆ.**

ಸಿ.ಸಿ. ಸಂಖ್ಯೆ.**516/2021**

| | | |
|---|---|---|
| ಸಾಕ್ಷಿದಾರರ ಹೆಸರು | ಲಲಿತಮ್ಮ | ಸಿ.ಡಬ್ಲ್ಯೂ: 1  ಪಿ.ಡಬ್ಲ್ಯೂ:1 |
| ಗಂಡನ ಹೆಸರು | ಶಂಕರೇಗೌಡ | |
| ವಯಸ್ಸು | 55 ವರ್ಷ | |
| ಉದ್ಯೋಗ | ವ್ಯವಸಾಯ | |
| ವಾಸ ಸ್ಥಳ | ದುರ್ಗದಹಳ್ಳಿ, ಮೂಡಿಗೆರೆ ತಾ: | |

ದಿನಾಂಕ: 21.01.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ ಸ.ಸ.ಅ.ರವರಿಂದ:**

1. ನ್ಯಾಯಾಲಯದ ಮುಂದಿರುವ ಆರೋಪಿ ನನಗೆ ಗೊತ್ತು. ಚಾಸಾ.7 ನನ್ನ ಗಂಡ. ಚಾಸಾ.8 ನನ್ನ ಮಗ. ಚಾಸಾ.6 ನನಗೆ ಗೊತ್ತು. ದಿ: 14.06.2019 ರಂದು ಮಧ್ಯಾಹ್ನ 3.00 ಗಂಟೆ ಸುಮಾರಿಗೆ ನನ್ನ ಗಂಡನ ಹೆಸರಿನಲ್ಲಿ ಇರುವ ಸರ್ವೆ ನಂಬರ್ 64/24 ರಲ್ಲಿ ನಮ್ಮ ನೀರಿನ ಕಾಲುವೆಗೆ ಆರೋಪಿ ಅಡ್ಡಕಟ್ಟಿದ್ದರು. ಅಡ್ಡಕಟ್ಟಿದ್ದನ್ನು ಬಿಡಿಸಲು ನಾನು ಹೋದಾಗ ಆರೋಪಿ ನನಗೆ ಹಾರೆ ಗುದ್ದಲಿಯಿಂದ ನನ್ನ ಮುಖದ ಎಡಭಾಗಕ್ಕೆ ಹೊಡೆದರು. ನನ್ನ ಕಣ್ಣಿನ ಭಾಗದಲ್ಲಿ ರಕ್ತ ಬಂದಿತ್ತು. ಕೊಲೆ ಬೆದರಿಕೆ ಹಾಕಿದ್ದರು. ಎಳೆದಾಡಿ ಕಲ್ಲಿನಿಂದ ನನ್ನ ಬಲಬುಜಕ್ಕೆ ಹೊಡೆದು ಕೊಲೆ ಮಾಡಿ ಜೈಲಿಗೆ ಹೋಗುತ್ತೇನೆ ಎಂದು ಹೇಳಿದ್ದರು. ನಾನು ಕೆಳಗೆ ಬಿದಿದ್ದೆ. ನಾನು ಎದ್ದು ಮನೆಯ ಕಡೆಗೆ ಹೋಗುವಾಗ ಚಾಸಾ.6 ಗಿರೀಶ್ ರವರು ಸಿಕ್ಕು ನನ್ನನ್ನು ಮನೆಯ ಬಳಿ ಬಿಟ್ಟರು.

2. ನಂತರ ನನ್ನನ್ನು ನನ್ನ ಗಂಡ ಮತ್ತು ಮಗ ಮೂಡಿಗೆರೆ ಆಸ್ಪತ್ರೆಗೆ ಕರೆದುಕೊಂಡು ಹೋದರು. ಪೊಲೀಸರು ಬಂದು ರಾತ್ರಿ 8.00 ರಿಂದ 9.00 ರವರೆಗೆ ನನ್ನ ಹೇಳಿಕೆಯನ್ನು ಪಡೆದರು.

3. ದಿ: 14.06.2017 ರಂದು ಪೊಲೀಸರು ಸ್ಥಳಕ್ಕೆ ಬಂದು 1.30 ರಿಂದ 2.00

ರವರೆಗೆ ಮಹಜರ್ ಮಾಡಿದರು. ಆ ಸಮಯದಲ್ಲಿ ಚಾಸಾ.2 ಮತ್ತು 3 ಇದ್ದರು. ಸ್ಥಳದಲ್ಲಿ ಛಾಯಚಿತ್ರವನ್ನು ತೆಗೆದಿದ್ದರು. ಕಲ್ಲು ಮತ್ತು ನೈಟಿಯನ್ನು ಪೊಲೀಸರು ತೆಗೆದುಕೊಂಡು ಹೋದರು. ನಂತರ ದಿಃ 18 ರಂದು ನಾನು ನ್ಯಾಯಾಲಯಕ್ಕೆ ಬಂದು ಹೇಳಿಕೆಯನ್ನು ನೀಡಿದ್ದೇನೆ.

4. ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.1 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ಸ್ಥಳ ಮಹಜರ್ ನಲ್ಲಿ ಇರುವ ಸಹಿಯನ್ನು ಸಾಕ್ಷಿ ಗುರುತಿಸಿದ್ದು ಅದನ್ನು ನಿ.ಪಿ.2 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ಛಾಯಚಿತ್ರಗಳಲ್ಲಿ ನಾನು ಹಾಜರಿರುತ್ತೇನೆ. ಸಾಕ್ಷಿ ಛಾಯಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿ.ಪಿ.3 ಮತ್ತು 4 ಎಂದು ಗುರುತಿಸಲಾಯಿತು. ನ್ಯಾಯಾಧೀಶರ ಮುಂದೆ ನೀಡಿದ ಕಲಂ 164 Cr.P.C ಯ ಹೇಳಿಕೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.5 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.5(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಕೇಸರಿ ಬಣ್ಣದ ನೈಟಿ ಮತ್ತು ಕಲ್ಲನ್ನು ಆ ದಿನ ಮಹಜರ್ ಕಾಲದಲ್ಲಿ ವಶಕ್ಕೆ ಪಡೆದಿದ್ದರು ಎಂದು ಗುರುತಿಸಿದ್ದರಿಂದ ಅದನ್ನು ಮು.ಮಾ.1 ಮತ್ತು 2 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಗುದ್ದಲಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮು.ಮಾ.3 ಎಂದು ಗುರುತಿಸಲಾಯಿತು. ಆ ದಿನ ನನಗೆ ಹಲ್ಲೆ ಮಾಡಿದ ಆರೋಪಿ ಈ ದಿನ ನ್ಯಾಯಾಲಯದ ಮುಂದೆ ಹಾಜರಿರುತ್ತಾರೆ.

<u>ಪಾಟೀ ಸವಾಲು ಶ್ರೀ ಎಂ.ವಿ.ಜೆ ವಕೀಲರಿಂದ – ಆರೋಪಿತನ ಪರವಾಗಿ</u>

5. ನನ್ನ ಮಗಳ ಗಂಡ ಚಾಸಾ.3 ಸತೀಶ್ ಎಂದರೆ ಸರಿ. ನನಗೆ ಇಬ್ಬರು ಹೆಣ್ಣು ಮಕ್ಕಳು. ನನ್ನ 2 ನೇ ಮಗಳನ್ನು ಪುಟ್ಟೇಗೌಡರ ಮಗ ಉದಯ್ ಯಾನೆ ತಾರನಾಥ ರವರಿಗೆ ಮದುವೆ ಮಾಡಿಕೊಟ್ಟಿದ್ದೇವೆ ಎಂದರೆ ಸರಿ. ಪುಟ್ಟೇಗೌಡ ಆರೋಪಿಯ ಸ್ವಂತ ಅಣ್ಣ ಎಂದರೆ ಸರಿ. ಚಾಸಾ.2 ನಮ್ಮ ದೂರದ ಸಂಬಂಧಿಕ. ಚಾಸಾ.2 ನನ್ನ ಗಂಡನ ಮಾವನ ಮಗ.

6. ಆರೋಪಿ ಹಲ್ಲೆ ಮಾಡಿದಾಗ ಮೈ ಮತ್ತು ಬಟ್ಟೆಗಳು ರಕ್ತ ಆಗಿದ್ದವು. ಪೆಟ್ಟಾದಾಗ ನನ್ನ ಪ್ರಜ್ಞೆ ತಪ್ಪಿ ನಾನು ಕೆಳಗೆ ಬಿದಿದ್ದೆ. ನಾನು ಕೆಳಗೆ ಬಿದ್ದಾಗ ನೆಲದ ಮೇಲೆ ರಕ್ತ ಆಗಿತ್ತು. ಪೊಲೀಸರಿಗೆ ನಾನು ಕೆಳಗೆ ಬಿದ್ದ ಸ್ಥಳ ಮತ್ತು ರಕ್ತ ಆದ ಸ್ಥಳವನ್ನು ತೋರಿಸಿದ್ದೆ. ನನಗೆ ಪೆಟ್ಟಾದಾಗ ಆರೋಪಿ ಒಬ್ಬರೇ ಇದ್ದರು. ವೈದ್ಯರ ಬಳಿ ನನಗೆ ಅಭಿಶೇಕ್ ಎಂಬುವವರು ಹಲ್ಲೆ ಮಾಡಿದ್ದರು ಎಂದು ಹೇಳಿಲ್ಲ. ನಾನು ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ಆರೋಪಿಯ ಹೆಂಡತಿ ಮತ್ತು ಮಗ ಬಂದು ಗಲಾಟೆಯನ್ನು ಬಿಡಿಸಿದ್ದರು ಎಂದು ಹೇಳಿದ್ದೇನೆ. ನ್ಯಾಯಾಧೀಶರ ಮುಂದೆ ನೀಡಿದ ಹೇಳಿಕೆಯಲ್ಲಿ ಆರೋಪಿಯ ಹೆಂಡತಿ ಮತ್ತು ಮಗ ಬಂದು ಗಲಾಟೆಯನ್ನು ಬಿಡಿಸಿದ್ದರು ಎಂದು ಹೇಳಿಲ್ಲ. ಆ ವಿಚಾರವನ್ನು ನ್ಯಾಯಾಧೀಶರ ಮುಂದೆ ಹೇಳಲು ತೊಂದರೆ ಇರಲಿಲ್ಲ. ಆರೋಪಿ ನನ್ನ ಮೇಲೆ ನಾನು ದೂರನ್ನು ನೀಡುವ ಮೊದಲೇ ದೂರನ್ನು ನೀಡಿದ್ದರು ಎಂದರೆ ಸರಿ.

7. ನಮ್ಮ ಊರಿನಿಂದ ಮೂಡಿಗೆರೆಗೆ ಬರಬೇಕಾದರೆ ಬಾಳೂರು ಠಾಣೆಯ ಮುಂಭಾಗದಿಂದ ಬರಬೇಕು ಎಂದರೆ ಸರಿ. ನಿಮ್ಮ ಊರಿನಿಂದ ಮೂಡಿಗೆರೆಗೆ ಆ ದಿನ ಬರುವಾಗ ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಲು ನಿಮಗೆ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ನನಗೆ ಸುಸ್ತಾಗಿತ್ತು ಎಂದು ನುಡಿಯುತ್ತಾರೆ. ನಮ್ಮ ಮನೆಯಿಂದ 3 ಕಿಮೀ ಅಂತರದಲ್ಲಿ ಸುಂಕಸಾಲೆಯಲ್ಲಿ ಸರ್ಕಾರಿ ಆಸ್ಪತ್ರೆ ಇರುತ್ತದೆ. ನಮ್ಮ ಮನೆಯಿಂದ 6 ಕಿಮೀ ಅಂತರದಲ್ಲಿ ಜವಳಿಯಲ್ಲಿ ಸರ್ಕಾರಿ ಆಸ್ಪತ್ರೆ ಇರುತ್ತದೆ. ಸಾಕ್ಷಿ ಸ್ವತಃ ಸಂಜೆ ಆಗಿದ್ದರಿಂದ ವೈದ್ಯರು ಇರುತ್ತಾರೋ ಇಲ್ಲವೋ ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಜವಳಿಯಿಂದ 3 ಕಿ.ಮೀ ಮುಂದರೆ ಸರ್ಕಾರಿ ಆಸ್ಪತ್ರೆ ಇರುತ್ತದೆ ಎಂದರೆ ಸಾಕ್ಷಿ ಇರಬಹುದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಕೊಟ್ಟಿಗೆಹಾರದಲ್ಲಿಯು ಸರ್ಕಾರಿ ಆಸ್ಪತ್ರೆ ಇರುತ್ತದೆ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ಕೊಟ್ಟಿಗೆಹಾರದಿಂದ ಮುಂದೆ ಬಣಕಲ್ ನಲ್ಲಿ ಮೂಡಿಗೆರೆಯಿಂದ 15 ಕಿಮಿ ಹಿಂದೆ ಸರ್ಕಾರಿ ಆಸ್ಪತ್ರೆ ಇದೆ ಎಂದರೆ ಇರಬಹುದು.

8. ನನಗೆ ಪೆಟ್ಟಾದಾಗ ಮಧ್ಯಾಹ್ನ 3.00 ಗಂಟೆಯಾಗಿತ್ತು. ನಮ್ಮ ಸರ್ವೆ ನಂಬರ್

64/24 ಪಕ್ಕಾ ಪೋಡಿ ಆಗಿದೆ ಎಂದು ಸಾಕ್ಷಿಗೆ ಪಕ್ಕಾ ಪೋಡಿ ನಕ್ಷೆಯ ದೃಢೀಕೃತ ನಕಲನ್ನು ತೋರಿಸಲಾಗಿ ಸಾಕ್ಷಿ ಹೌದು ಎಂದು ಒಪ್ಪಿದ್ದರಿಂದ ಅದನ್ನು ನಿ.ಡಿ.1 ಎಂದು ಗುರುತಿಸಲಾಯಿತು. ಸರ್ವೆ ನಂಬರ್ 64/24 ರಲ್ಲಿ ನಮಗೆ 24 ಗುಂಟೆ ಜಮೀನು ಇರುತ್ತದೆ. ಸರ್ವೆ ನಂಬರ್ 64/24 ರಲ್ಲಿ ನಮಗೆ 24 ಗಂಟೆ ಜಮೀನು ಇಲ್ಲದಿದ್ದರು ಇದೇ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಸರ್ವೆ ನಂಬರ್ ನಲ್ಲಿ 24 ಗುಂಟೆ ಜಮೀನಿನ ಸ್ವಾಧೀನದಲ್ಲಿ ನಾವು ಇದ್ದೇವೆ. ಸಾಕ್ಷಿಗೆ ಸರ್ವೆ ನಂಬರ್ 64/24 ರ ಪಹಣಿ ಪತ್ರಿಕೆಯನ್ನು ತೋರಿಸಿ ಶಂಕರೇಗೌಡ ಎಂಬುವವರಿಗೆ ಇದೇ ಎಂದು ಕೇಳಲಾಗಿ ಸಾಕ್ಷಿ ಹೌದು ಎಂದು ಒಪ್ಪಿದ್ದರಿಂದ ಸದರಿ ದಾಖಲೆಯನ್ನು ನಿ.ಡಿ.2 ಎಂದು ಗುರುತಿಸಲಾಯಿತು. ಆರೋಪಿಗೆ ಯಾವ ಸರ್ವೆ ನಂಬರ್ ನಲ್ಲಿ ಎಷ್ಟು ಜಮೀನು ಇದೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂಬರ್ 64/24 ರ ಜಮೀನನ್ನು ಹೊರತುಪಡಿಸಿ ದುರ್ಗದಹಳ್ಳಿಯಲ್ಲಿ ನಮಗೆ ಬೇರೆ ಜಮೀನು ಇರುವ ಬಗ್ಗೆ ನನಗೆ ಗೊತ್ತಿಲ್ಲ. ಸರ್ವೆ ನಂಬರ್ 64/5 ರಲ್ಲಿಯು ನನ್ನ ಗಂಡನಿಗೆ ಜಮೀನು ಇದೆ ಎಂದರೆ ಸರಿ. ಆ ಸರ್ವೆ ನಂಬರ್ ನಲ್ಲಿ 3 ಗುಂಟೆ ಜಮೀನು ಇರುತ್ತದೆ. ಸರ್ವೆ ನಂಬರ್ 64/24 ರ ಜಮೀನಿನಲ್ಲಿ ನೀರಿನ ಕಾಲುವೆ ಇರುತ್ತದೆ, ಅದು ಚಿಕ್ಕ ಹಳ್ಳಕ್ಕೆ ಹೋಗುತ್ತದೆ. ಅ ಚಿಕ್ಕ ಹಳ್ಳದ ಹೆಸರು ಹಬ್ಬಿ ಹಳ್ಳ ಆಗಿರುತ್ತದೆ. ಸರ್ವೆ ನಂಬರ್ 64/24 ರ ಯಾವ ಬದಿಯಲ್ಲಿಯು ನಿ.ಡಿ.1 ರಲ್ಲಿ ಹಳ್ಳವನ್ನು ಕಾಣಿಸಿಲ್ಲ ಎಂದರೆ ಸರಿ. ಸರ್ವೆ ನಂಬರ್ 64/24 ರ ಚಕ್ಕುಬಂದಿ ಹೇಳಲು ಆಗುವುದಿಲ್ಲ.

9. ರಕ್ತ ಆಗಿದ್ದ ಬಟ್ಟೆಯನ್ನು ಆ ದಿನ ಮನೆಗೆ ತೆಗೆದುಕೊಂಡು ಹೋಗಿ ಬಟ್ಟೆಯನ್ನು ತೊಳೆಯಲಿಲ್ಲ. ನ್ಯಾಯಾಲಯದ ಮುಂದಿರುವ ಮು.ಮಾ.2 ನೈಟಿಯ ಮೇಲೆ ರಕ್ತ ಕಾಣಿಸುವುದಿಲ್ಲ, ನನ್ನ ಮಕ್ಕಳು ಬಟ್ಟೆಯನ್ನು ತೊಳೆದು ಹಾಕಿರುತ್ತಾರೆ. ಮು.ಮಾ.2 ಅನ್ನು ಪೊಲೀಸರಿಗೆ ಮನೆಯಿಂದ ತಂದು ಕೊಟ್ಟಿದ್ದೆ. ಬಟ್ಟೆಯನ್ನು ಸ್ಥಳಕ್ಕೆ ತಂದು ಕೊಟ್ಟಿರುತ್ತೇವೆ. ಮು.ಮಾ.2 ರ ಮೇಲೆ ಸಹಿ ಪಡೆದು ಚೀಟಿಯನ್ನು ಅಂಟಿಸಿದ್ದರು. ಮು.ಮಾ.2 ರ ಮೇಲೆ ಚೀಟಿ ಕಂಡು ಬರುವುದಿಲ್ಲ ಎಂದರೆ ಸಾಕ್ಷಿ ನ್ಯಾಯಾಲಯದ ಮುಂದೆ ಆ ಚೀಟಿ

ಇರುತ್ತದೆ ಎಂದು ನುಡಿಯುತ್ತಾರೆ. ನಾನು 3 ದಿನ ಒಳರೋಗಿಯಾಗಿ ಆಸ್ಪತ್ರೆಯಲ್ಲಿ ದಾಖಲಾಗಿದ್ದೆ. ನನಗೆ ಘೋರ ಸ್ವರೂಪದ ಪೆಟ್ಟು ಆಗಿತ್ತು ಎಂದರೆ ಸರಿ, ಸಾಕ್ಷಿ ಹೊಲಿಗೆಯನ್ನು ಹಾಕಿದ್ದರು ಎಂದು ನುಡಿಯುತ್ತಾರೆ.

10. ಚಾಸಾ.3 ಹೊಸೂರು ಗ್ರಾಮದವರು. ನಮ್ಮ ಊರಿನಿಂದ ಹೊಸೂರು ಎಷ್ಟು ಕಿಮೀ ಅಂತರದಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ಸ್ಥಳಕ್ಕೆ ಬಂದ ವಾರ ನನಗೆ ಗೊತ್ತಿಲ್ಲ. 17 ನೇ ತಾರೀಖಿನಂದು ಬಂದಿದ್ದರು. ಪೊಲೀಸರು ಸ್ಥಳಕ್ಕೆ ಬಂದಾಗ ನಮ್ಮ ಜಮೀನಿನಲ್ಲಿ ಇದ್ದ ಕಾಲುವೆಯಲ್ಲಿ ನೀರು ನಿಂತಿತ್ತು. ನಿ.ಪಿ.3 ಮತ್ತು 4 ಛಾಯಚಿತ್ರಗಳಲ್ಲಿ ನೀರು ಇರುವುದು ಕಂಡು ಬರುವುದಿಲ್ಲ ಎಂದರೆ ಸರಿ. ಪೊಲೀಸರು 1.30 ರಿಂದ 2.00 ರವರೆಗೆ 2 ಪುಟ ಬರವಣಿಗೆಯನ್ನು ಮಾಡಿದ್ದರು. ಎಲ್ಲಾ ಪುಟಗಳನ್ನು ನಾನು ಸಹಿ ಮಾಡಿದ್ದೇನೆ. ಬರವಣಿಗೆ ಮಾಡಿದ ದಾಖಲೆಯಲ್ಲಿ ಚಾಸಾ.2 ಮತ್ತು 3 ರವರು ಚಕ್ಕುಬಂದಿಯನ್ನು ಹೇಳಿ ಬರೆಸಿದ್ದರು. ನಿ.ಪಿ.1 ರಲ್ಲಿ ಏನು ಬರೆದಿದೆ ಎಂದು ನನಗೆ ಓದು ಬರದ ಕಾರಣ ಗೊತ್ತಿಲ್ಲ. ನಿ.ಪಿ.1 ರ 1 ರಿಂದ 3 ರ ಪುಟದಲ್ಲಿ ನನ್ನ ಸಹಿ ಇರುವುದಿಲ್ಲ. 1 ರಿಂದ 3 ರ ಪುಟದಲ್ಲಿ ನನ್ನ ಸಹಿ ಇರದ ಕಾರಣ ಆ ಪುಟಗಳಲ್ಲಿ ಏನು ಬರೆದಿದೆ ಎಂದು ನನಗೆ ಮಾಹಿತಿ ಇಲ್ಲ ಎಂದರೆ ಸಾಕ್ಷಿ ನಾನು ಸಹಿ ಹಾಕಿದ್ದೇನೆ ಏನು ಬರೆದಿದೆ ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ.

11. ಸರ್ವೆ ನಂಬರ್ 64/24 ರ ಯಾವ ದಿಕ್ಕಿನಲ್ಲಿಯು ಆರೋಪಿಗೆ ಸೇರಿದ ಜಮೀನು ಬರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ವಾಸವಿರುವ ಮನೆಯಿಂದ 1 ಕಿಮೀ ಅಂತರದಲ್ಲಿ ನಮಗೆ ಸೇರಿದ ಸರ್ವೆ ನಂಬರ್ 64/24 ಬರುತ್ತದೆ ಎಂದರೆ ಸರಿಯಲ್ಲ. ನಾವು ವಾಸವಿರುವ ಮನೆ ಯಾವ ಸರ್ವೆ ನಂಬರ್ ನಲ್ಲಿ ಬರುತ್ತದೆ ಎಂದು ನನಗೆ ಗೊತ್ತಿಲ್ಲ.  ಈ ಕೇಸಿನ ಆರೋಪಿ ನನ್ನ ಮೇಲೆ ದಾಖಲಾಗಿರುವ ಪ್ರಕರಣದಲ್ಲಿ ಯಾವ ದಿನಾಂಕದಂದು ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿದಿದ್ದರು ಎಂದು ನನಗೆ ಗೊತ್ತಿಲ್ಲ. ಈ ದಿನ ನ್ಯಾಯಾಲಯಕ್ಕೆ ನನ್ನ ಜೊತೆ ನನ್ನ ಮಗ ಬಂದಿದ್ದಾರೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತಹ ಘಟನೆ ಯಾವುದು ನಡೆಯದೇ ಇದ್ದರು ನನ್ನ

ಮಗನ ಮಾತನ್ನು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಮತ್ತು ನನ್ನ ಮಗಳ ಗಂಡನ ತಂದೆಯ ನಡುವೆ ಸಿವಿಲ್ ವ್ಯಾಜ್ಯ ನಡೆಯುತ್ತಿದೆ ಎಂದರೆ ನನಗೆ ಗೊತ್ತಿಲ್ಲ. ಆ ಕೇಸನ್ನು ರಾಜಿ ಮಾಡಿಸುವ ಉದ್ದೇಶದಿಂದ ನನ್ನ ಮೂಲಕ ಅವರು ಈ ಪ್ರಕರಣವನ್ನು ದಾಖಲಿಸಿದ್ದಾರೆ ಎಂದರೆ ಸುಳ್ಳು.

12. ಸರ್ವೆ ನಂಬರ್ 64/24 ರ ಅಕ್ಕ ಪಕ್ಕದಲ್ಲಿ ಆರೋಪಿಯ ಜಮೀನು ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 64/9 ರಲ್ಲಿ ಆರೋಪಿಯ ಹೆಂಡತಿಯ ಜಮೀನು ಇದೆ ಎಂದರೆ ಸರಿ. ಸರ್ವೆ ನಂಬರ್ 64/24 ರ ಜಮೀನಿನಿಂದ ಸ್ವಲ್ಪ ದೂರದಲ್ಲಿ ಸರ್ವೆ ನಂಬರ್ 64/9 ರ ಜಮೀನು ಬರುತ್ತದೆ. ನಾನು ಜಮೀನಿಗೆ ಕೆಲಸಕ್ಕೆ ಹೋಗುತ್ತೇನೆ. ನಮ್ಮ ಮನೆಯಿಂದ ಜಮೀನಿಗೆ ಹೋಗುವಾಗ ಜೆಲ್ಲಿ ಕಲ್ಲು ರಸ್ತೆ ಬರುತ್ತದೆ ಎಂದರೆ ಸರಿ. ಜೆಲ್ಲಿ ಕಲ್ಲು ರಸ್ತೆಯಲ್ಲಿ ನಾನು ನಡೆದುಕೊಂಡು ಹೋಗುವಾಗ ಬಿದ್ದು ಗಾಯಪಡಿಸಿಕೊಂಡಿದ್ದೇನೆ ಆರೋಪಿಯು ಹೊಡೆದಿಲ್ಲ ಎಂದರೆ ಸರಿಯಲ್ಲ. ಮು.ಮಾ.1 ಹಬ್ಬಿ ಹಳ್ಳಿಯಲ್ಲಿ ಇರುವ ಕಲ್ಲು ಎಂದರೆ ಸುಳ್ಳು. ಮು.ಮಾ.1 ರಿಂದ ಒಬ್ಬ ಗಂಡಸು ನನಗೆ ಹೊಡೆದರೆ ಮೂಳೆ ಮುರಿತ ಆಗುವ ಗಾಯ ಆಗುತ್ತಿತ್ತು, ನನಗೆ ಮು.ಮಾ.1 ರಿಂದ ಆರೋಪಿ ಯಾವುದೇ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಆದೇಶದ ಮೇರೆಗೆ ವಕೀಲರಾದ ನಾನು ನಿಮ್ಮ ಜಾಗಕ್ಕೆ ಬಂದಿದ್ದೆನಾ ಎಂದರೆ ಹೌದು. ನನಗೆ ಪೆಟ್ಟಾಗಲು ನ್ಯಾಯಾಲಯದ ಮುಂದಿರುವ ಆರೋಪಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಅವಾಚ್ಯ ಶಬ್ದಗಳಿಂದ ಬೈದು ಕೊಲೆ ಬೆದರಿಕೆ ಹಾಕಿದ್ದ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.1 ರಿಂದ 3 ಅನ್ನು ಈ ಕೇಸಿಗಾಗಿ ನಾವು ಪೊಲೀಸರಿಗೆ ನೀಡಿದ್ದೇವೆ ಎಂದರೆ ಸರಿಯಲ್ಲ. ನನಗೆ ಪೆಟ್ಟಾದ ದಿನ ಯಾವುದು ಎಂದು ನನಗೆ ಹೇಳಲು ಆಗುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸತ್ಯಕ್ಕೆ ದೂರವಾಗಿವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ